"ನನಗೆಂಥ ವಿಶ್ರಾಂತಿ ಮಗನೇ. ಇಷ್ಟು ವರ್ಷ ಕೆಲಸ ಮಾಡಿ ಮನೇಲಿ ಸುಮ್ಮನೆ ಕೂರಲಿಕ್ಕೆ ಆಗುವುದೇ?" ಎನ್ನುತ್ತಾನೆ ನಗುತ್ತಲೇ.

ಒಮ್ಮೊಮ್ಮೆ ಲಹರಿಗೆ ಬಿದ್ದಾಗ, "ಕೃಷ್ಣ, ಗಾಂಧೀಜಿಯವರು ಹೇಳಿದ್ದಾರಲ್ಲವೇ, ಭಾರತವೆಂದರೆ ಹಳ್ಳಿಗಳು. ಈ ನಾಡಿಗೆ ಬೇಕಿರುವುದು ಗುಡಿ ಕೈಗಾರಿಕೆಗಳು. ನೀನೇ ನೋಡಿದ ಹಾಗೇ ಇಲ್ಲಿಯವರೆಗೆ ಇಲ್ಲಿ ಎಲ್ಲರೂ ಕೈತುಂಬಾ ಕೆಲಸಮಾಡಿಕೊಂಡಿದ್ದೇವಲ್ಲವೇ. ಈಗ ಎಲ್ಲಿಯ ಕೆಲಸ. ನಾವೇ ಕೆಲಸವಿಲ್ಲದೆ ಖಾಲಿ ಕುಳಿತಾಯ್ತು. ಹೀಗೆ ಎಷ್ಟು ಸಾವಿರ ಜನ ಖಾಲಿ ಕುಳಿತಿದ್ದಾರೋ ಏನೋ? ಇದೆಲ್ಲ ಹೇಗಾಯಿತು ಗೊತ್ತಾ. ಅದೇ, ಆ ವಿದೇಶೀ ಮಹಾಮಾರಿ, ಇಷ್ಟಕ್ಕೂ ಅದರ ಬಣ್ಣ ಗಮನಿಸಿದ್ದೀಯೋ. ಕೆಂಪು, ರಕ್ತದ ಬಣ್ಣ. ಆ ರಕ್ತದ ಹಣಕ್ಕೆ ಯಾವತ್ತೂ ಆಶೆಪಡಬೇಡ."

"ಯಾವತ್ತೋ ಒಂದು ದಿನ ಆ ಮಾರಿಯನ್ನ ದೇಶದಿಂದ ಓಡಿಸುವುದನ್ನು ನೋಡಬೇಕು" ಅನ್ನುತ್ತಿದ್ದ. ಬರುಬರುತ್ತಾ ಚಂದ್ರಣ್ಣನ ಆರೋಗ್ಯ ಕ್ಷೀಣವಾಯಿತು.

ವಿಷಯ ಗೊತ್ತಾದ ಶೇಷರೆಡ್ಡಿ, "ಚಂದ್ರಣ್ಣನವರ ಆರೋಗ್ಯ ಕೆಟ್ಟಿದೆಯಂತೆ. ಮನೆಕಡೆ ಕಷ್ಟವಾಗಿದೆಯಂತೆ. ನನ್ನ ಕಡೆಯಿಂದ ಕೂಲ್‌ಡ್ರಿಂಕ್ಸ್ ಅವರಂಗಡಿಗೆ ಕಳಿಸಿಕೊಡುತ್ತೇನೆ. ನನ್ನ ಭಾಗದ ಲಾಭವನ್ನು ಸಹ ಅವರಿಗೆ ಬಿಟ್ಟುಕೊಡುತ್ತೇನೆ. ಅವರು ಒಪ್ಪಿಕೊಳ್ಳಲಿ" ಎಂದು ಹೇಳಿ ಕಳಿಸಿದ.

ಅದನ್ನು ಕೇಳಿದ್ದೇ, "ಹಾ..." ಎಂದು ಎದೆ ಹಿಡಿದು ಕುಸಿದು ಬಿದ್ದ ಚಂದ್ರಣ್ಣ. ನಂತರ ಏನಾಯಿತೋ ಬಹಳ ಜನಕ್ಕೆ ಗೊತ್ತಾಗಲಿಲ್ಲ. ಹಾಸಿಗೆ ಹಿಡಿದ ಚಂದ್ರಣ್ಣ ಕೆಲವೇ ದಿನಗಳಲ್ಲಿ ತೀರಿಕೊಂಡ. ಚಂದ್ರಣ್ಣ ತೀರಿಕೊಂಡ ಕೆಲವು ವರ್ಷಗಳ ನಂತರ ಭಾರತದಿಂದ ನಿಜವಾಗಿಯೂ ಕೋಕಾ-ಕೋಲಾವನ್ನು ಹೊರಗಟ್ಟಲಾಯಿತು. ಆಗಿನ ಕೇಂದ್ರ ಸಚಿವ ಜಾರ್ಜ್ ಫರ್ನಾಂಡೀಸರ ಬಗ್ಗೆ ಬಹಳಷ್ಟು ಕಡೆ ಚರ್ಚೆಯಾಯಿತು. ಕಾವಲಿಯಲ್ಲೂ ಸಹ ಚರ್ಚೆಯಾಯಿತು. ಆದರೆ ಚಂದ್ರಣ್ಣನನ್ನು ಅಲ್ಲಿ ಯಾರೂ ನೆನಪಿಸಿಕೊಳ್ಳಲಿಲ್ಲ.

★★★

ಕಡಲಿನ ದಂಡೆಯಲ್ಲಿರುವ 'ಕಾವಲಿ' ಎಂಬ ಆ ಊರಿನಲ್ಲಿ ಈಗ ಎಲ್ಲಿ ನೋಡಿದರೂ ಕಪ್ಪಗೆ, ಕಡಿದ ತಲೆ ನೇತಾಡುತ್ತಿರುವಂತೆ ಕೋಕಾ-ಕೋಲಾ ಬಾಟಲಿಗಳು ಕಾಣ್ತವೆ. ಬಹುಶಃ ಕೆಲಸ ಕಡಿಮೆಯಾದ, ದುಡಿಮೆಯ ಬಾಗಿಲು ಮುಚ್ಚಿದ ಸ್ಥಳೀಯ ಕುಶಲಕರ್ಮಿಗಳು ಕೆಲಸಗಾರರ ತಲೆಗಳಂತೆ ಅವು ಕಾಣುತ್ತವೆ.

ಸಕ್ಕರೆ, ಬೆಲ್ಲ, ನಿಂಬೆರಸ ಕೆಲವು ಸ್ಥಳೀಯ ಬೇರುಗಳು ಮುಂತಾದವುಗಳಿಂದ ಪವಾಡವನ್ನೇ ಮಾಡಬಲ್ಲಂತಹ ಕುಶಲ ಕೆಲಸಗಾರರು ಈಗ್ಯಾರೂ ಉಳಿದಿಲ್ಲ. ಅವರ ಜೊತೆಗೆ ಅವರ ಕೌಶಲ್ಯವೂ ಮರೆಯಾಗಿದೆ.

ಕೋಕಾ-ಕೋಲಾ ಹಾಗೂ ಇದರಂಥ ನೂರಾರು ವಿದೇಶಿ ವಸ್ತುಗಳು ಭಾರತದೊಳಕ್ಕೆ ಮತ್ತೆ ದಾಳಿಯಿಟ್ಟ ನಂತರ ದಿಲ್ಲಿಯಿಂದ ಹಳ್ಳಿಯ ವರೆಗೆ ಹಸಿರಿನ ಗದ್ದೆಗಳಿಂದ, ಮರಳುಗಾಡಿನ ವರೆಗೆ ಮುಪ್ಪಾನ ಮುದುಕರಿಂದ ಮಕ್ಕಳ ವರೆಗೆ ಯುವಕರು, ಗಂಡುಹೆಣ್ಣುಗಳು ಈ ವಿದೇಶಿ ಮಾಯೆಯೊಳಗೆ ಬಿದ್ದ ನಂತರ ಊರುಗಳಲ್ಲಿ ಇಂಥಾ ತಲೆಗಳು ನೇತಾಡುತ್ತಲೇ ಇವೆ. ಇದರಿಂದ ಹೊರತಾಗಿ ಅಲ್ಲೊಂದು ಇಲ್ಲೊಂದು ಇನ್ನೂ ನಿಂತಿರಬಹುದು. ಅವು ಚಂದ್ರಣ್ಣನ ಮಗ ಕೃಷ್ಣನಂಥವರದು.

ಕೃಷ್ಣನಿಗೆ ಈಗ ಅರವತ್ತು ವರ್ಷ ವಯಸ್ಸು. ತಂದೆ ಚಂದ್ರಣ್ಣನಂತೆ ಇವನೂ ಅಂಗಡಿಯಲ್ಲಿ ಬಿಳಿ ಖದ್ದರ್ ಬಟ್ಟೆ ಉಟ್ಟಿದ್ದಾನೆ. ಅವು ಅಲ್ಲಲ್ಲಿ ಹರಿದಿವೆ. ಆದರೆ ತಂದೆಯ ಮಾತಿನಂತೆ ವಿದೇಶೀ ರಕ್ತದ ಕೂಲಿಗೆ ತಲೆಬಾಗದೆ ದೃಢವಾಗಿ ನಿಂತಿದ್ದಾನೆ.